## Workshop on Environment protection @ Badiadka Gramothan Seva Centre




ಉರುವಾಲು : ಗ್ರಾಮೋತ್ಥಾನ ಸೇವಾ ಸಂಸ್ಥೆ ಉರುವಾಲು ಇದರ ವತಿಯಿಂದ ಫೆ.6ರಂದು ಶ್ರೀ ಭಾರತೀ ವಿದ್ಯಾಸಂಸ್ಥೆ ಉರುವಾಲು ಇಲ್ಲಿ ಹಾವು–ನಾವು–ಪರಿಸರ ಎಂಬ ವಿಷಯದ ಬಗ್ಗೆ ಖ್ಯಾತ ಉರಗ ತಜ್ಞ ಡಾ। ರವೀಂದ್ರನಾಥ್ ಐತಾಳ್ ಪುತ್ತೂರು ಇವರ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆ ಕಾರ್ಯಕ್ರಮ ನಡೆಯಿತು.

ಅಧ್ಯಕ್ಷತೆಯನ್ನು ಉರುವಾಲು ಶ್ರೀ ಭಾರತೀ ವಿದ್ಯಾಸಂಸ್ಥೆ ಅಧ್ಯಕ್ಷ ಶಂಕರ ನಾರಾಯಣ ಭಟ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಉರುವಾಲು ಗ್ರಾಮೋತ್ಥಾನ ಸೇವಾ ಸಂಸ್ಥೆ ಅಧ್ಯಕ್ಷ ರವಿಪ್ರಕಾಶ್ ವಾದ್ಯಕೋಡಿ, ಉರುವಾಲು ಗ್ರಾಮೋತ್ಥಾನ ಸೇವಾ ಸಂಸ್ಥೆ ಕ್ಷೇತ್ರ ಅಧಿಕಾರಿ ದುರ್ಗಾಪ್ರಸಾದ್, ಚೆನ್ನೈ ಗ್ರಾಮೋತ್ಥಾನ ಇಂಡಿಯಾ ಫೌಂಡೇಶನ್ ಯೋಜನಾ ಅಧಿಕಾರಿ ಜೀವನ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು.

ಕು। ರಮ್ಯಾ ನಿರೂಪಿಸಿ, ಕು। ಪ್ರಾರ್ಥನ ಸ್ವಾಗತಿಸಿ, ಕು। ಆಶಿಕಾ ವಂದಿಸಿದರು.